Notice of a motion *re.*—Rights and Privileges of Members

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರ ಮೇಲೆ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ತಮ್ಮ ಅವಗಾಹನೆಗಾಗಿ ಕಳುಹಿಸಿದ್ದೇನೆ. ಅದರಲ್ಲಿರತಕ್ಕ ವಿಷಯ ಏನೆಂದರೆ ಈ ಸಭೆಯಲ್ಲಿ ನಿನ್ನೆ ಚರ್ಚೆ ನಡೆಯುತ್ತಿದ್ದಾಗ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜಅರಸ್‌ರವರು

"I will have to move a privilege motion"

ಎಂದು ಬೆದರಿಕೆ ರೀತಿಯಲ್ಲಿ ನನ್ನ ಬಗ್ಗೆ ಒಂದು ಮಾತನ್ನು ಆಡಿದರು. ಅದು ಈ ಸಭೆಯಲ್ಲಿ ಸದಸ್ಯನಾಗಿ ನನಗೆ ಇರತಕ್ಕ ಹಕ್ಕು ಉಲ್ಲಂಘನೆ ಅಷ್ಟೇ ಅಲ್ಲ, ಈ ಸಭೆಯ ಹಕ್ಕಿನ ಉಲ್ಲಂಘನೆಯೂ ಆಗುತ್ತದೆ. ಈ ದೃಷ್ಟಿಯಿಂದ ನಾನು ಇಲ್ಲಿ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ತಮಗೆ ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ತಾವು ಅಪ್ಪಣೆ ಕೊಟ್ಟರೆ ಅದರ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಲು ಪ್ರಯತ್ನ ಮಾಡುತ್ತೇನೆ.

MADAM SPEAKER.—I have just now received it and I will consider it.

Admission of Call Attention Notices in the list of business under rules

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್ (ಸಿರ್ಸಿ).—ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಉತ್ತರ ಕನ್ನಡ ಜಿಲ್ಲೆಯ ಸಿರಸಿ ಸಿದ್ದಾಪುರ ಇಲ್ಲಿನ ಜನರ ತೊಂದರೆ ಬಗ್ಗೆ ಸರಕಾರಕ್ಕೆ ಕಳುಹಿಸಿ ಸುಮಾರು ಐದು ದಿನಗಳಾದರೂ ಇಲ್ಲಿ ಬರಲಿಲ್ಲ. ಇದರ ಬಗ್ಗೆ ಏನಾಯಿತು ಎನ್ನುವುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ಅದು ಮುಂದೆ ಬರುತ್ತದೆ.

ಶ್ರೀ ಶರಣಪ್ಪ (ದೇವದುರ್ಗ).—ನಾನೂ ಕೂಡ ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಕೊಟ್ಟಿದ್ದೆ. ಅದು ಇನ್ನೂ ಬರಲಿಲ್ಲ.

ಶ್ರೀ ಎಸ್. ಎಂ. ಚಂದ್ರಶೇಖರ (ಹೊಸನಗರ).—ನನ್ನದೂ ಒಂದು ಕಾಲ್ ಅಟೆನ್‌ಷನ್ ಕಳುಹಿಸಿದ್ದೆ ಅದೂ ಬರಲಿಲ್ಲ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್ ನೋಟೀಸು ಯಾವ ಸ್ವರೂಪದ್ದು ಎನ್ನುವುದು ತಮಗೆಲ್ಲ ಗೊತ್ತಿದೆ. ಒಂದು ದಿವಸಕ್ಕೆ ಒಂದೇ ಕಾಲ್ ಅಟೆನ್‌ಷನ್ ಮೋಷನ್ ಬರುತ್ತದೆ. ಇದಕ್ಕಿಂತ ಹೆಚ್ಚಿಗೆ ಬರಲು ಅವಕಾಶ ಇಲ್ಲ. ಆದರಂತೆ ಮುಂದೆ ಬರುತ್ತದೆ.

Tours by Some Ministers during the Sessions period.

Sri C. M. ARUMUGHAM (K.G.F.).—I have a submission to make. For the past few days we are discussing motion of Thanks to the Governor's Addres in this House. This is a subject wherein we could discuss any matter relating to almost all the Departments. Hence, I feel it necessary on the part of all the Hon. Ministers to be present in the House except some of them who may have work in the Upper House. But it is seen in the papers that some of the Hon. Ministers are undertaking tours unnecessarily. I want to know whether it is proper for the Hon. Ministers to undertake tours when the Session is going on. This is a submission and I want a ruling from the Chair